## ಮುತ್ತುಗಳಿಂದ ದೀಪ

ಮುತ್ತುಗಳು, ದಾರ, ಪ್ಲಾಸ್ಟಿಕ್ ಬಟ್ಸ್ (ತಂತು ಇರುವ) ಲೇಸ್, ಮಕಮಲ ಬಟ್ಟೆ, ಫೆವಿಕಾಲ್ ಗಮ್.

ಮಾಡುವ ವಿಧಾನ

ಮೊದಲು ಚಿಕ್ಕ ಚಿಕ್ಕ ಮುತ್ತಿನ ಸರಗಳನ್ನು 2–3 ಪದರಾಗಿ ಮಾಡಿಕೊಳ್ಳಿ. ನಿಮಗಿಷ್ಟವಾದ ಸೈಜಿನಲ್ಲಿ, ನಂತರ ಪ್ಲಾಸ್ಟಿಕ್ ಬುಟ್ಟಿಗೆ ಕೊನೆಯ ಅಂಚಿನಲ್ಲಿ ಒಂದು ಇಂಚು ಬಿಟ್ಟು ಒಂದರ ನಂತರ ಒಂದು ತೂತು ಮಾಡಿಕೊಳ್ಳಿ. ತಯಾರು ಮಾಡಿದ ಸರವನ್ನು ಆ ತೂತಿನಲ್ಲಿ ತೂರಿಸಿ, ಒಂದೊಂದರಂತೆ ಪಕ್ಕ ಪಕ್ಕ ಪೋಣಿಸಿ, ಗಂಟು ಹಾಕಿಕೊಳ್ಳಿ. ಮಧ್ಯ ಭಾಗಕ್ಕೆ ಚುಮುಕಿ ತರ ಮುತ್ತಿನ ಸರವನ್ನು ಜೋತು ಬಿಡಿ.





ಸುಂದರವಾಗಿ ವಿಭಿನ್ನವಾಗಿ ದೀಪಗಳಿಂದ ಅಲಂಕರಿಸಿ ಹಬ್ಬವನ್ನು ವಿಭಿನ್ನವಾಗಿ ಆಚರಿಸಿ, ಎಲ್ಲರ ಮೆಚ್ಚುಗೆ ಪಡೆದು ಸಂತೋಷಪಡಬಹುದು.

### ದೀಪ ಮಾಡೋದು ಹೇಗೆ?

### ಸೀಡಿಯಿಂದ ದೀಪ

ಹಳೆಯ ಸೀಡಿ, ಲೇಸ್, ಕುಂದನ್, ಮುತ್ತುಗಳು, ಬಣ್ಣ ಬಣ್ಣದ ರಿಬ್ಬನ್, ಗಮ್, ಪ್ರಣತಿ.

ಮಾಡುವ ವಿಧಾನ: ಸೀಡಿಗೆ ನಿಮಗಿಷ್ಟವಾದ ಬಣ್ಣವನ್ನು ಹಚ್ಚಿ. ಅದರ ಅಂಚಿನಲ್ಲಿ ಮುತ್ತುಗಳನ್ನು ಅಂಟಿಸಿ. ನಂತರ ಮಧ್ಯಭಾಗಕ್ಕೆ ರಿಬ್ಬನ್‌ದಿಂದ ಚಿಕ್ಕ ಚಿಕ್ಕ ಹೂ ತಯಾರಿಸಿ ಅಂಟಿಸಿ. ಮಧ್ಯದಲ್ಲಿ ದೀಪವನ್ನು ಅಲಂಕರಿಸಿ. ಇದನ್ನು ಎಲ್ಲಿ ಬೇಕಾದರೂ ಇಟ್ಟು ದೀಪ ಹಚ್ಚಿ.

### ಸಾದಾ ಕನ್ನಡಿ ಮುತ್ತು ಲೇಸ್

ಮಾಡುವ ವಿಧಾನ: ಗೋಲಾಕಾರದ ಕನ್ನಡಿಗೆ ಕೊನೆಯಲ್ಲಿ ಲೇಸ್ ಹಚ್ಚಿ. ಮಧ್ಯದಲ್ಲಿ ಇನ್ನೊಂದು ಚಿಕ್ಕ ಗೋಲಾಗಿ ಲೇಸ್ ಹಚ್ಚಿ. ಮಧ್ಯದಲ್ಲಿ ದೀಪಗಳಿಂದ ಅಲಂಕರಿಸಿ. ಅದರ ಸುತ್ತಲೂ ಹೂವಿಂದ ಅಥವಾ ಮುತ್ತುಗಳಿಂದ ಬಣ್ಣ ಬಣ್ಣದ ದೀಪಗಳು ಹೀಗೆ ಅನೇಕ ತರ ಜೋಡಿ ಹಾಕಬಹುದು.

ಇನ್ನು ದೊಡ್ಡ ಗ್ಲಾಸಿನ ಬೌಲಿನಲ್ಲಿ ಮಧ್ಯದಲ್ಲಿ ನೀರು ತುಂಬಿ ಅದರಲ್ಲಿ ಹೂವಿನ ಪಕಳೆ ಉದುರಿಸಿ ಮಧ್ಯದಲ್ಲಿ ನೀರಿನ ಮೇಲೆ ಕ್ಯಾಂಡಲ್ ಅಥವಾ ದೀಪಗಳನ್ನು ತೇಲಿ ಬಿಡಬಹುದು.

ದೀಪ ಮತ್ತು ರಂಗೋಲಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ರಂಗೋಲಿಯ ಸುತ್ತಲೂ ಬಣ್ಣ ಬಣ್ಣದ ದೀಪಗಳನ್ನು ಅಲಂಕರಿಸಿದರೆ ನೋಡುಗರ ಕಣ್ಣಿಗೆ ಆನಂದವೇ ಸರಿ.

### ದೀಪಗಳ ಹಬ್ಬ ದೀಪಾವಳಿ

ದೀಪಗಳಿಂದ ಮನೆ, ಮನಸ್ಸು, ಕಣ್ಣು ಎಲ್ಲದಕ್ಕೂ ಹಿತ ನೀಡುವ ಸುಂದರವಾದ ಹಬ್ಬ ದೀಪಗಳ ಹಬ್ಬ ದೀಪಾವಳಿ. ಹಣತೆಯಲ್ಲಿರುವ ಬತ್ತಿ ತಾನು ಸುಟ್ಟರೂ ಇತರರಿಗೆ ಬೆಳಕನ್ನು ಹರಡಿಸುತ್ತದೆ. ಅದೇ ತರ ಮಾನವನ ತನ್ನಲ್ಲಿರುವ ಅವಗುಣಗಳನ್ನು ಸುಟ್ಟು ಇನ್ನೊಬ್ಬರ ಬಾಳಿಗೆ ಬೆಳಕಾಗಿ ದಾರಿ ದೀಪವಾಗಬೇಕು. ಎಂಬ ಸ್ಥೂಲಾರ್ಥವನ್ನು ಇದು ಬಿಂಬಿಸುತ್ತದೆ. ಕತ್ತಲನ್ನು ಹೊಡೆದೋಡಿಸುತ್ತದೆ ದೀಪದ ಬೆಳಕು. ಅದೇ ರೀತಿ ಜೀವನದ ಅಂಧಕಾರವನ್ನು ಹೊಡೆದೋಡಿಸಿ ಬೆಳಕಿನ ಬಿಂಬದಲ್ಲಿ ಬದುಕನ್ನು ರೂಪಿಸಬೇಕು.

ದೀಪಗಳಿಂದ ಜಗತ್ತಿಗೆ ಹೇಗೆ ನಾವು ಬೆಳಕನ್ನು ಹರಡಿಸುತ್ತೇವೆ ಅಷ್ಟೇ ಮಾಡಿದ್ರೆ ಸಾಲದು. ಹೊರ ಜಗತ್ತಿನ ಬೆಳಕು ನಮಗೆ ನಿಜವಾಗಿ ಸುಂದರ ಅನಿಸಬೇಕಾದರೆ ನಮ್ಮ ಒಳ ಆತ್ಮ ಕೂಡಾ ಸುಂದರವಾಗಿರಬೇಕು. ಮೊದಲು ನಮ್ಮ ಆತ್ಮವನ್ನು ಜ್ಞಾನದ ಜ್ಯೋತಿಯಿಂದ ಬೆಳಗಿ ಆ ಜ್ಯೋತಿ ಬೆಳಕನ್ನು ಬೇರೆಯವರ ಬೆಳಕಾಗಬೇಕು. ಆವಾಗಲೇ ಜೀವನ ಹಾಗೂ ದೀಪಗಳ ನಿಜವಾದ ಅರ್ಥ.

ನಮ್ಮ ಆತ್ಮದ ಜ್ಯೋತಿಯಿಂದ ಕಾಮ, ಕ್ರೋಧ, ಮದ, ಮತ್ಸರ, ಅಹಂಕಾರ ಇವೆಲ್ಲವನ್ನು ಹೊಡೆದೋಡಿಸಿ ಭಗವಂತನ ಪ್ರೀತಿಯ ಪಾತ್ರರಾಗಬೇಕು. ನಾವೆಲ್ಲ ಹೇಗೆ ದುಷ್ಟನಾದ ರಾವಣನ ಸಂಹಾರ ಆಯಿತೋ, ಹಾಗೆ ನಮ್ಮಲ್ಲಿರುವ ಜ್ಞಾನದ ಜ್ಯೋತಿ ಬೆಳಗಿಸಿ ಜೀವನ ಸಾರ್ಥಕವಾಗಿಸಿ, ದೀಪಾವಳಿಯನ್ನು ಅರ್ಥಪೂರ್ಣವಾಗಿ ಆಚರಿಸೋಣ.

ದೀಪಾವಳಿ ಮನೆ–ಮನವನ್ನು ಬೆಳಗುವ ಹಬ್ಬ. ಜ್ಞಾನದ ಬೆಳಕನ್ನು ಪಸರಿಸುವ ಈ ವಿಶಿಷ್ಟ ಹಬ್ಬದಲ್ಲಿ ದೀಪಲಕ್ಷ್ಮಿಯ ಆರಾಧನೆ, ಹಣದ ಅಧಿದೇವತೆಯ ಪೂಜೆ, ಗೋಮಾತೆಯ ಪೂಜೆ ವಿಶೇಷವಾಗಿ ನಡೆಯುತ್ತದೆ.

ಹೊಸದಾಗಿ ಮದುವೆಯಾದ ದಂಪತಿಗೆ ದೀಪಾವಳಿ 'ಹೊಸ ಹಬ್ಬ'. ಅಳಿಯ ಮಾವನ ಮನೆಗೆ ಬಂದು ಉಡುಗೊರೆ ಸ್ವೀಕರಿಸುವುದು ದೀಪಾವಳಿ ಹಬ್ಬದಲ್ಲೇ. ಓದು, ಉದ್ಯೋಗ ನಿಮಿತ್ತ ಮಕ್ಕಳು ಯಾವ ದೇಶ, ಯಾವ ಭಾಗಕ್ಕೆ ಹೋದರೂ ದೀಪಾವಳಿ ಹಬ್ಬಕ್ಕೆ ಮನೆಗೆ ಬರುತ್ತಾರೆ. ಹೀಗಾಗಿ ಮನೆ ಮಂದಿಯನ್ನೆಲ್ಲ ಒಂದುಗೂಡಿಸುವ ದೊಡ್ಡ ಹಬ್ಬ ದೀಪಾವಳಿ. ■